ಪ್ರಧಾನ ದಿವಾಣಿ ನ್ಯಾಯಾಧಿಶರು ಹಾಗೂ ಪ್ರ. ದ. ನ್ಯಾಯಿಕ ದಂಡಾಧಿಕಾರಿಗಳ ನ್ಯಾಯಾಲಯ, ಚಿಕ್ಕೋಡಿ. ಸಾಃ ಚಿಕ್ಕೋಡಿ.

| | |
|---|---|
| ಓ ಎಸ್ ನಂ | 393/2017 |
| ವಾದಿ | ಪಿ.ಡಬ್ಲ್ಯೂ.1 |
| ದಿನಾಂಕ | 13-06-2023 |

<u>ಸಾಕ್ಷಿಗೆ ಪ್ರಮಾಣ ವಚನ ಭೋಧಿಸಲಾಯಿತು.</u>

ಪಾಟೀ ಸವಾಲುಃ 5 ರಿಂದ 7, 13 ರಿಂದ 15 ಮತ್ತು 23 ನೇ ಪ್ರತಿವಾದಿ ಪರ ಶ್ರೀ ಕೆ ಆರ್ ಟಿ ನ್ಯಾಯವಾದಿಗಳಿಂದ

ನಾನು ವಿದ್ಯಾಬ್ಯಾಸ ಮಾಡಿರುವುದಿಲ್ಲ. ಕನ್ನಡ ಓದಲು ಬರೆಯಲು ಬರುವುದಿಲ್ಲ. ನನ್ನ ಸಾಕ್ಷಿಯ ಮುಖ್ಯ ವಿಚಾರಣೆಯ ಪ್ರಮಾಣ ಪತ್ರವನ್ನು ಆಂಗ್ಲ ಬಾಷೆಯಲ್ಲಿ ಬರೆದಿದ್ದು ಅದರಲ್ಲಿ ಬರೆದಿರುವ ವಿಷಯ ನನಗೆ ಗೊತ್ತಿಲ್ಲ ಎಂದು ಸೂಚಿಸುವುದು ಸರಿ. ಪ್ರಸ್ತುತ ಪ್ರಕರಣವನ್ನು ನಾನೇ ಪ್ರತಿವಾದಿಯರ ವಿರುದ್ಧ ದಾವಾ ಸ್ವತ್ತಿನಲ್ಲಿ ಭಾಗ ಕೋರಿ ಸಲ್ಲಿಸಿರುತ್ತೇನೆ. ಅಪ್ಪಯ್ಯ ಡಬ್ಬ ಎನ್ನುವವರು ನನ್ನ ಮಾವ ಇರುತ್ತಾರೆ. ಸದರಿಯವರಿಗೆ 3 ಜನ ಮಕ್ಕಳು ಇರುತ್ತಾರೆ. ಸದರಿಯವರ ಹೆಸರುಗಳು ಎಂದರೆ ಶಿವಲಿಂಗ, ಬಾಬು, ಬಸಪ್ಪ ಎಂದು ಇರುತ್ತದೆ. ಶಿವಲಿಂಗ ಎನ್ನುವವರಿಗೆ ಅಣ್ಣಪ್ಪ, ಕಾಶವ್ವ, ಶೇಖವ್ವ ಹಾಗೂ ಸೂಶೀಲವ್ವ ಎಂದು ಮಕ್ಕಳು ಇರುತ್ತಾರೆ. ಶಿವಲಿಂಗ ಇವರ ಇಬ್ಬರು ಹೆಣ್ಣು ಮಾಕ್ಕಳು ಗಂಗವ್ವ ಮತ್ತು ಶಿವವ್ವ ಎನ್ನುವವರು ತೀರಿಕೊಂಡಿದ್ದು ಅವರ ವಾರಸುದಾರರು ಜೀವಂತ ಇರುವ ಕುರಿತು ನನಗೆ ಮಾಹಿತಿ ಇಲ್ಲ. ಸದರಿಯವರನ್ನು ಕಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇಲ್ಲ ಎಂದು ಸೂಚಿಸುವುದು ಸರಿಯಲ್ಲ.

ಬಸಪ್ಪ ಈತನಿಗೆ ತಮ್ಮಣ್ಣ, ಬರಮು ಮತ್ತು ಪ್ರಬು ಎನ್ನುವವ ಗಂಡು ಮಕ್ಕಳು. ಗೌರವ್ವ, ಹೌಶವ್ವ ಮತ್ತು ಶಾಂತಾ ಎನ್ನುವ ಹೆಣ್ಣು ಮಕ್ಕಳು ಇರುತ್ತಾರೆ. ಸದರಿ ಹೆಣ್ಣು ಮಕ್ಕಳು ಜೀವಂತ ಇರುತ್ತಾರೆ. ಸದರಿಯವರು ಮರಣ ಹೊಂದಿರುವ ಕುರಿತು ನಾವು ನಮ್ಮ ನ್ಯಾಯವಾದಿಗಳಿಗೆ ಮಾಹಿತಿ ನೀಡಿಲ್ಲ. ಗೌರವ್ವ ಮತ್ತು ಹೌಶವ್ವ ಎನ್ನುವವರು ಪ್ರಸ್ತುತ ಪ್ರಕರಣದಲ್ಲಿ ಕಕ್ಷಿದಾರರು ಇರುವುದಿಲ್ಲ ಎಂದು ಸೂಚಿಸುವುದು ಸರಿ. ಉಮರಾಣಿ ಯಲ್ಲಿರುವ ಆಸ್ತಿಗಳ ಕುರಿತಾಗಿ ಬಸಪ್ಪ ಶಿವಲಿಂಗ ಮತ್ತು ಬಾಬು ಇವರ ಮಧ್ಯ ವಿಭಾಗ ಆಗಿರುತ್ತದೆ ಎಂದರೆ ಸಾಕ್ಷಿ ಕೇವಲ ಜಮೀನಿನಲ್ಲಿ ಆಗಿರುತ್ತದೆ ಎಂದು ನುಡಿಯುತ್ತಾರೆ. ನಾವು ಜಮೀನಿನಲ್ಲಿ ಇರುವ ಮನೆಯಲ್ಲಿ ವಾಸ ಮಾಡುತ್ತಿದ್ದೇವೆ ಸದರಿ ಜಮೀನಿನ ಸರ್ವೆ ನಂಬರ ನನಗೆ ಗೊತ್ತಿಲ್ಲ. ಸೂರ್ಯಕಾಂತ ಎನ್ನುವವರು ಚಿಕ್ಕೋಡಿಯ ಬಸ್ತಿ ಗಲ್ಲಿಯಲ್ಲಿ ವಾಸ ಇರುತ್ತಾರೆ. ಸದರಿ ಮನೆ ಸಂಖ್ಯೆ ನನಗೆ ಗೊತ್ತಿಲ್ಲ. ಸದರಿಯವರು ಹಳೆ ಮನೆಯನ್ನು ಕೆಡವಿ ಹೊಸ ಮನೆಯನ್ನು ಕಟ್ಟಿಕೊಂಡು ವಾಸ ಮಾಡುತ್ತಿದ್ದಾರೆ

ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ಪೂರ್ವಕ್ಕೆ ಬಾಬು ಈತನು ಕ್ರಯಕ್ಕೆ ಪಡೆದ ಆಸ್ತಿ ಇರುತ್ತದೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿಯಲ್ಲಿ ಮನೆ ಕಟ್ಟಿಕೊಂಡು ವಾಸ ಮಾಡಿದ್ದನು ಎಂದು ಸೂಚಿಸುವುದು ಸರಿಯಲ್ಲ. ಬಾಬು ಇವರು ಯಾವುದೇ ಮನೆಯನ್ನು ಕಟ್ಟಿರಲಿಲ್ಲ ನಮ್ಮ ಹಿರಿಯರಿಂದ ಬಂದ ಮನೆಯಲ್ಲಿ ವಾಸ ಇದ್ದರು. ಹಾಗೇಂದು ನಾನು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು  ಸರಿಯಲ್ಲ.  ಆದ್ದರಿಂದ ಸದರಿ ಮನೆಗೆ ನಾನು ಯಾವುದೇ ತಕರಾರು ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸೂರ್ಯಕಾಂತ ಈತನು ಬಾಬು ಎನ್ನುವವರ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ.

ಜಮೀನುಗಳಲ್ಲಿ ಯಾವ ವರ್ಷ ಭಾಗ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಸದರಿ ವಿಭಾಗವನ್ನು ಯಾವ ಮೂಲಕ ಮಾಡಿಕೊಂಡಿರುತ್ತಾರೆ ನನಗೆ ಗೊತ್ತಿಲ್ಲ. ಜಮೀನುಗಳು ಮತ್ತು ಚಿಕ್ಕೋಡಿಯಲ್ಲಿರುವ ಆಸ್ತಿಗಳನ್ನು ಸೇರಿಕೊಂಡೆ ಭಾಗ ಮಾಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಜಮೀನುಗಳಲ್ಲಿ ಪಶ್ಚಿಮ ದಿಕ್ಕಿನಲ್ಲಿರುವ ಜಮೀನನ್ನು ನಮಗೆ ನೀಡಿರುತ್ತಾರೆ. ಬಸಪ್ಪ ಎನ್ನುವವರಿಗೆ ಮಧ್ಯ ಭಾಗದ ಜಮೀನು ಮತ್ತು ಬಾಬು ಎನ್ನುವವರಿಗೆ ಪೂರ್ವಕ್ಕೆ  ಇರುವ ಜಮೀನು ನೀಡಿರುತ್ತಾರೆ. ಅದರಂತೆ ಚಿಕ್ಕೋಡಿಯಲ್ಲಿರುವ ಆಸ್ತಿಯನ್ನು ಸಹ ಭಾಗ ಮಾಡಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಅದರಂತೆ ಚಿಕ್ಕೋಡಿಯಲ್ಲಿರುವ ಆಸ್ತಿಯಲ್ಲಿ ಪೂರ್ವ ದಿಕ್ಕಿನಲಿ ಬಾಬು ಈತನ ಪಾಲಿಗೆ ಬಂದ ಆಸ್ತಿಯಲ್ಲಿ ಸುರೇಶ ಈತನು ಮನೆ ಕಟ್ಟಿಕೊಂಡಿರುತ್ತಾನೆ ಎಂದು ಸೂಚಿಸುವುದು ಸರಿಯಲ್ಲ. ದಾವಾ ಸ್ವತ್ತಿನ ದಾಖಲೆಗಳನ್ನು ನಾನು ನೋಡಿಲ್ಲ. ಸದರಿ ದಾಖಲೆಗಳಲ್ಲಿ ಶಿವಪುತ್ರ ಎನ್ನುವವರ ಹೆಸರು ಇರುತ್ತದೆ ಎಂದರೆ ಸಾಕ್ಷಿ ಸದರಿ ಹೆಸರು ಈಗ ರದ್ದು ಗೊಳಿಸಿರುತ್ತಾರೆ. ಶಿವಪುತ್ರ ಇವರ ಹೆಸರನ್ನು ತೆಗೆದು ಹಾಕಿರುವ ಕುರಿತು ನಾನು ದಾಖಲೆಯನ್ನು ನೋಡಿಲ್ಲ. ಶಿವಪುತ್ರ ಇವರ ಹೆಸರನ್ನು ದಾಖಲೆಯಿಂದ ತೆಗೆದು ಹಾಕಿರುತ್ತಾರೆ ಎಂದು ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು  ಸರಿಯಲ್ಲ. ಶಿವಪುತ್ರ ಇವರ ಹೆಸರಿಗೆ ಬಸ್ಸಪ್ಪ ಎನ್ನುವವರ ಮಕ್ಕಳು ಆಸ್ತಿಯನ್ನು ಕ್ರಯಕ್ಕೆ ನೀಡಿದ್ದು ಆದರೆ ಸದರಿ ಶಿವಪುತ್ರ ಈತನು ತನ್ನ ಹೆಸರಿಗೆ ದಾಖಲೆಗಳನ್ನು ಮಾಡಿಕೊಂಡಿಲ್ಲ. ಬಸಪ್ಪ ಇವರ ಮಕ್ಕಳು ಬರೆದು ಕೊಟ್ಟಿರುವ ಕ್ರಯ ಪತ್ರದ ಆದಾರ ಮೇಲೆ ಶಿವಪುತ್ರ ಈತನ ಹೆಸರು ದಾಖಲು ಆಗಿರುತ್ತದೆ ಎಂದು ಸೂಚಿಸುವುದು ಸರಿಯಲ್ಲ. ಶಿವಪುತ್ರ ಇವರ ಹೆಸರಿನಿಂದ ಇರುವ ಕ್ರಯ ಪತ್ರ ಅಥವಾ ದಾಖಲೆಗಳನ್ನು ನಾನು ಪ್ರಶ್ನೆ ಮಾಡಿಲ್ಲ. ಸದರಿ ಕ್ರಯ ಪತ್ರವನು ನಾನು ಒಪ್ಪಿ  ಕೊಂಡಿರುವುದರಿಂದ ದಾಖಲೆಗಳನ್ನು ಪ್ರಶ್ನೆ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಶಿವಪುತ್ರ ಇವರನ್ನು  ಉದ್ದೇಶ ಪೂರಕವಾಗಿ ಕಕ್ಷಿದಾರನ್ನಾಗಿ ಮಾಡಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಸದರಿಯವರನ್ನು ಕಕ್ಷಿದಾರರನ್ನಾಗಿ ಮಾಡಲು ನನಗೆ ಯಾವುದೇ ತೊಂದರೆ ಇರಲಿಲ್ಲ ಎಂದು ಸೂಚಿಸುವುದು ಸರಿಯಲ್ಲ. ಮಹಾದೇವ ಎನ್ನುವವರ ತೀರಿ ಕೊಂಡಿರುವ ಕುರಿತು ನನಗೆ ಮಾಹಿತಿ ಇಲ್ಲ. ಮಹಾದೇವ

ಎನ್ನುವವರಿಗೆ ಪುಷ್ಪಾ ಎನ್ನುವವಳು ಮಗಳು ಇರುತ್ತಾಳೆ ಎಂದು ಸೂಚಿಸುವುದು ಸರಿ. ಸದರಿಯವರನ್ನು ಕಕ್ಷಿದಾರರನ್ನಾಗಿ ಮಾಡಿಲ್ಲ ಎಂದು ಸೂಚಿಸುವುದು ಸರಿ. ಬಾಬು ಇವರ ಮನೆಯ ಹಿಂದುಗಡೆ ಸುನಂದಾ ಎನ್ನುವವರು ಮನೆ ಕಟ್ಟಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿ. ಸದರಿ ಆಸ್ತಿಗೆ ನಾನು ಯಾವುದೇ ತಕರಾರು ಮಾಡಿಲ್ಲ ಎಂದು ಸೂಚಿಸುವುದು ಸರಿ. ಸದರಿ ಸುನಂದಾ ಇವಳು ಬಾಬು ಇವರ ಆಸ್ತಿಯಲ್ಲಿ ಮನೆ ಕಟ್ಟಿಕೊಂಡಿರುತ್ತಾರೆ ಎಂದು ಸೂಚಿಸುವುದು ಸರಿಯಲ್ಲ. ಸದರಿ ವಿಷಯ ನನಗೆ ಗೊತ್ತಿದ್ದರು ಸಹ ಸುಳ್ಳು ಸಾಕ್ಷಿ ನುಡಿಯುತ್ತಿದ್ದೇನೆ ಎಂದು ಸೂಚಿಸುವುದು ಸರಿಯಲ್ಲ.

ಈ ಹಂತದಲ್ಲಿ ಮುಂದುವರೆ ಪಾಟೀ ಸವಾಲಿಗೆ ಕಾಲವಕಾಶ ಕೋರಿದ್ದು ನೀಡಲಾಯಿತು.

(ಸಾಕ್ಷಿಯ ಹೇಳಿಕೆಯನ್ನು ಮುಕ್ತ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮುಖಾಂತರ ಬೆರಳಚ್ಚು ಮಾಡಿಸಿ ಸಾಕ್ಷಿದಾರರಿಗೆ ಓದಿ ಹೇಳಲಾಯಿತು)

ಓ.ಹೇ.ಕೇ. ಸರಿ ಇದೆ.

ಪ್ರಧಾನ ದಿವಾಣಿ ನ್ಯಾಯಾಧಿಶರು,
ಚಿಕ್ಕೋಡಿ.